ದೂರವಾಣಿ ಸಂಖ್ಯೆ : 2419677/2419361
ಫ್ಯಾಕ್ಸ್: 0821-2419363/2419301

e-mail : registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570005

ಸಂಖ್ಯೆ: ಎಸಿ7/10(2)/2025-26 ದಿನಾಂಕ: 08.10.2025

## ಅಧಿಸೂಚನೆ-5

ವಿಷಯ: ಸ್ನಾತಕೋತ್ತರ ಕೋರ್ಸ್‌ಗಳಿಗೆ ಭರ್ತಿಯಾಗದೆ ಖಾಲಿ ಉಳಿದ ಸೀಟುಗಳ ಪ್ರವೇಶಾತಿ ಬಗ್ಗೆ.

ಉಲ್ಲೇಖ: 1. ಈ ಕಛೇರಿಯ ಅಧಿಸೂಚನೆ ಸಮ ಸಂಖ್ಯೆ ದಿನಾಂಕ: 04.08.2025

2. ಈ ಕಛೇರಿಯ ಅಧಿಸೂಚನೆ – 3ರ ಸಮ ಸಂಖ್ಯೆ ದಿನಾಂಕ: 09.09.2025
3. ಈ ಕಛೇರಿಯ ಅಧಿಸೂಚನೆ – 4ರ ಸಮ ಸಂಖ್ಯೆ ದಿನಾಂಕ: 24.09.2025
4. ವಿಶ್ವವಿದ್ಯಾನಿಲಯದ ಅಧ್ಯಯನ ವಿಭಾಗಗಳ/ ಕಾಲೇಜುಗಳ/ವಿದ್ಯಾರ್ಥಿಗಳ ಮನವಿ
5. ಮಾನ್ಯ ಕುಲಪತಿಯವರ ಆದೇಶ ದಿನಾಂಕ: 08.10.2025

*******

ಉಲ್ಲೇಖಿತ(4)ರ ಮನವಿ ಮೇರೆಗೆ, ಅಧಿಸೂಚನೆ-4ರ ವೇಳಾಪಟ್ಟಿಯಂತೆ ಪ್ರವೇಶಾತಿ ಪ್ರಕ್ರಿಯೆ ಅಂತ್ಯಗೊಂಡ ನಂತರ ಸೀಟುಗಳು ಭರ್ತಿಯಾಗದೆ ಉಳಿದಿದ್ದಲ್ಲಿ ಈ ಕೆಳಕಂಡಂತೆ ಕ್ರಮವಹಿಸಲು ನಿರ್ದೇಶಿತಳಾಗಿದ್ದೇನೆ.

1. Admission portalನಲ್ಲಿ Register ಆಗಿ ಶುಲ್ಕ ಪಾವತಿಸಿ ಪ್ರವೇಶ ಪರೀಕ್ಷೆ ಬರೆದು/ಬರೆಯದೇ ಪ್ರವೇಶಾತಿಗೆ ಅರ್ಜಿ ಸಲ್ಲಿಸದೇ ಇರುವಂತಹ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ವೆಬ್‌ಸೈಟ್ https://www.uompgadmissions.com/ ಮೂಲಕ Download ಮಾಡಿದ ಅರ್ಜಿಯನ್ನು Offline ಮುಖಾಂತರ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಭರ್ತಿ ಮಾಡಿ ಸಂಬಂಧಪಟ್ಟ ಅಧ್ಯಯನ ವಿಭಾಗ/ಕಾಲೇಜುಗಳಿಗೆ ಸಲ್ಲಿಸುವುದು.

2. Admission portalನಲ್ಲಿ Register ಆಗದೇ ಇರುವ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ವೆಬ್‌ಸೈಟ್ https://www.uompgadmissions.com/ ಮೂಲಕ Download ಮಾಡಿದ ಅರ್ಜಿಯನ್ನು Offline ಮುಖಾಂತರ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಭರ್ತಿ ಮಾಡಿ **ರೂ.1,500/-ಗಳನ್ನು** SBI Collect link ಮೂಲಕ ಪಾವತಿಸಿ ಸಂಬಂಧಪಟ್ಟ ಅಧ್ಯಯನ ವಿಭಾಗ/ಕಾಲೇಜುಗಳಿಗೆ ಸಲ್ಲಿಸುವುದು.

3. ವಿದ್ಯಾರ್ಥಿಗಳು ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ (verification), **ದಿನಾಂಕ 15-10-2025ರ** ಒಳಗೆ ಅಧ್ಯಯನ ವಿಭಾಗ/ಕಾಲೇಜುಗಳ ಹಂತದಲ್ಲೇ ಮೆರಿಟ್, ವರ್ಗವಾರು ಆಧಾರದ ಮೇಲೆ ಹಾಗೂ ಉಲ್ಲೇಖ(2)ರ ಅಧಿಸೂಚನೆ-3ರಲ್ಲಿ ತಿಳಿಸಿರುವ ಅಂಶಗಳನ್ನು ಅಳವಡಿಸಿಕೊಂಡು ನಿಯಮಾನುಸಾರ ಎಲ್ಲಾ ಪ್ರವೇಶಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬೇಕು.

4. ಮೇಲ್ಕಂಡಂತೆ ಪ್ರವೇಶಾತಿ ಪ್ರಕ್ರಿಯೆಗಳು ಪೂರ್ಣವಾದ ನಂತರ ಪ್ರವೇಶಾತಿಯು ನಿಗದಿತ ಸಂಖ್ಯಾಮಿತಿಯ ಒಳಗಿದ್ದಲ್ಲಿ ಅಥವಾ 10ಕ್ಕಿಂತ ಜಾಸ್ತಿಯಿದ್ದಲ್ಲಿ ತರಗತಿಗಳನ್ನು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಕ್ಯಾಲೆಂಡರ್‌ಅನ್ನು ಅನುಸರಿಸುವುದು. ಮುಂದುವರೆದು, ಪ್ರವೇಶಾತಿ ಸಂಖ್ಯಾಮಿತಿ ಹತ್ತಕ್ಕಿಂತ(10) ಕಡಿಮೆ ಇದ್ದಲ್ಲಿ ವಿದ್ಯಾರ್ಥಿಗಳ ಮನವೊಲಿಸಿ ಇತರೆ ಸಮಾನಾಂತರ ಪ್ರೋಗ್ರಾಂಗಳಿಗೆ ಅಥವಾ ಅರ್ಹತೆಯಿರುವ ಪ್ರೋಗ್ರಾಂಗಳಿಗೆ ಪ್ರವೇಶಾತಿಗಳನ್ನು Shift ಮಾಡುವುದು. ನಂತರ, ಈ ವಿಷಯವನ್ನು ವಿಶ್ವವಿದ್ಯಾನಿಲಯದ ಗಮನಕ್ಕೆ ತಂದು ಅನುಮತಿ ಪಡೆಯುವುದು.

**ವಿಶೇಷ ಸೂಚನೆ:**

1. **ದಿನಾಂಕ: 15.10.2025ರೊಳಗೆ** ಪ್ರವೇಶಾತಿ ಪ್ರಕ್ರಿಯೆಗಳನ್ನು ಮಾಡಿಕೊಂಡು, **ದಿನಾಂಕ: 20.10.2025ರೊಳಗೆ** ವಿದ್ಯಾರ್ಥಿಗಳ ವಿವರಗಳನ್ನು **UUCMS Portalನಲ್ಲಿ Upload** ಮಾಡುವಂತೆ ತಿಳಿಸಲಾಗಿದೆ.



ಮು.ತಿ.ನೋ

2. ವಿಶ್ವವಿದ್ಯಾನಿಲಯ ಅಧಿಸೂಚನೆ ಸಂಖ್ಯೆ: ಎಸಿ7(ಎ)/29/2025-26, ದಿನಾಂಕ: 13.08.2025ರಲ್ಲಿ ಹೊರಡಿಸಿರುವ ಶೈಕ್ಷಣಿಕ ವೇಳಾಪಟ್ಟಿಯಂತೆ ಅನುಸರಿಸುವುದು.

ಉಪ ಕುಲಸಚಿವ(ಶೈಕ್ಷಣಿಕ)
ಉಪ ಕುಲಸಚಿವರು, (ಶೈಕ್ಷಣಿಕ),
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-

ಇವರಿಗೆ;

1. ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳು/ನಿರ್ದೇಶಕರುಗಳು/ಸಂಯೋಜನಾಧಿಕಾರಿಗಳು/ಮುಖ್ಯಸ್ಥರು, ಮಾನಸಗಂಗೋತ್ರಿ, ಮೈಸೂರು
2. ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಪ್ರಾಂಶುಪಾಲರುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ನಡೆಸುತ್ತಿರುವ ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಡುವ ಎಲ್ಲಾ ಸರ್ಕಾರಿ/ಖಾಸಗಿ/ಸ್ವಾಯತ್ತ ಕಾಲೇಜುಗಳ ನಿರ್ದೇಶಕರು/ ಪ್ರಾಂಶುಪಾಲರುಗಳಿಗೆ.
4. ಕುಲಸಚಿವರು(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಪ್ರೊ. ಕೆ. ರಾಮಚಂದ್ರ ಕಿಣಿ, ಅಧ್ಯಕ್ಷರು, Admission Reformation, Regulation & Implementation Committee, ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
6. ಪ್ರೊ. ನಾಗೇಂದ್ರಸ್ವಾಮಿ ಎಚ್.ಎಸ್, ಸಂಯೋಜಕರು, ಪ್ರವೇಶಾತಿ ಪರೀಕ್ಷೆ ಉಪ ಸಮಿತಿ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
7. ನಿರ್ದೇಶಕರು, ಪಿ.ಎಂ.ಇ.ಬೋರ್ಡ್, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಆಡಳಿತಾಧಿಕಾರಿಗಳು, ಆಡಳಿತಾಧಿಕಾರಿಗಳ ಕಛೇರಿ, ಮಾನಸಗಂಗೋತ್ರಿ, ಮೈಸೂರು.
9. ನಿರ್ದೇಶಕರು, ಅಂತರಾಷ್ಟ್ರೀಯ ಕೇಂದ್ರ, ಲಲಿತಕಲೆಗಳ ಕಾಲೇಜು ಆವರಣ, ಮಾನಸಗಂಗೋತ್ರಿ, ಮೈಸೂರು.
10. ನಿರ್ದೇಶಕರು, ಐಸಿಡಿ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು – **ಈ ಅಧಿಸೂಚನೆಯನ್ನು ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕರ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕೆಂದು ಕೋರಿದೆ.**
11. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯ ಭವನ, ಮೈಸೂರು.
12. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ, ಮಾನಸಗಂಗೋತ್ರಿ, ಮೈಸೂರು.
13. ಸಂಯೋಜಕರು, ಎನ್.ಎಸ್.ಎಸ್., ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಮೈ.ವಿ.ವಿ. ನಿಲಯ, ಮೈಸೂರು.
14. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
15. ಎಲ್ಲಾ ಬಟವಾಡೆ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
16. ಎಲ್ಲಾ ಉಪ/ಸಹಾಯಕ ಕುಲಸಚಿವರು, ಆಡಳಿತ ಶಾಖೆ/ಪರೀಕ್ಷಾ ವಿಭಾಗ, ಮೈವಿವಿ, ಮೈಸೂರು.
17. ಎಲ್ಲಾ ಅಧೀಕ್ಷಕರು, ಆಡಳಿತ ಶಾಖೆ/ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
18. ಮಾನ್ಯ ಕುಲಪತಿ/ಕುಲಸಚಿವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
19. ಕಛೇರಿ ಪ್ರತಿ.